ಅಧ್ಯಕ್ಷರು : ತಮ್ಮಲ್ಲಿ ಇಷ್ಟೆ ವಿನಂತಿ ಮಾಡಿಕೊಳ್ಳುತ್ತೇನೆ, ತಾವು ಯಡಿಯುರಪ್ಪ ಸನ್ಯಾಸ್ಯ ಮಲ್ಲಿಕಾರ್ಜುನ ಖರ್ಗೆಯವರು, ವಾಟಾಳ್ ನಾಗರಾಜರವರು, ಇತರ ವಿರೋಧ ಪಕ್ಷಗಳ ಎಲ್ಲಾ ಸ್ನೇಹಿತರುಗಳು ಕಳುಹಿಸಿರತಕ್ಕಂತಹ ಸೂಚನೆಗಳು ನನ್ನ ಕಛೇರಿಗೆ ತಲುಪಿವೆ. ಪ್ರಾಸ್ತಾವಿಕವಾಗಿ ನೀವು ಮಾತನಾಡುವುದಕ್ಕೆ, ನಿಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ದಯಮಾಡಿ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಡಿ. ವಿಷಯ ಗಾಂಭೀರ್ಯತೆಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಆದರೆ ಪ್ರಶ್ನೋತ್ತರ ವೇಳೆಯನ್ನು ಕೈಬಿಟ್ಟು ಇದನ್ನು ತೆಗೆದುಕೊಳ್ಳುವುದಕ್ಕೆ ತಾವೆಲ್ಲರೂ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ತಮ್ಮನ್ನು ಮನವೊಲಿಸುವಂಥ ಪ್ರಯತ್ನವನ್ನು ಮಾಡುತ್ತೇನೆ. ಏಕೆಂದರೆ, ಇನ್ನೇನೂ ಇಲ್ಲ ಇಡೀ ನಮ್ಮ ರಾಜ್ಯದ ಸರ್ಕಾರಿ ನೌಕರರು ಒಂದು ದಿಗ್ಭ್ರಮೆಯಲ್ಲಿ ಕುಳಿತಿರುವಂತಹ ಕಾಲದಲ್ಲಿ, ಇಡೀ ದೇಶದ ಅಧಿಕಾರಿ ವರ್ಗಕ್ಕೆ ಗೊಂದಲವುಂಟಾಗಿರುವಂತಹ ಈ ಸಂದರ್ಭದಲ್ಲಿ....

ಅಧ್ಯಕ್ಷರು : ಬರೀ ಸರ್ಕಾರಿ ನೌಕರರಿಗೆ ಏತಕ್ಕೆ ನಮಗೆಲ್ಲರಿಗೂ ಕೂಡ ದಿಗ್ಭ್ರಮೆಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಡೀ ರಾಜ್ಯದ ನಾಲ್ಕು ಮುಕ್ಕಾಲು ಕೋಟಿ ಜನ ಇದರ ಬಗ್ಗೆ ಆಸಕ್ತಿಯನ್ನು ಹೊಂದಿರುವಂತಹ ಈ ಸಂದರ್ಭದಲ್ಲಿ ಇದಕ್ಕಿಂತ ಪ್ರಮುಖವಾದ ವಿಷಯ ಮತ್ತೊಂದು ಯಾವುದಿದೆ? ಅದಕ್ಕೆ ನಾನು ಪ್ರಶ್ನೋತ್ತರ ವೇಳೆಯನ್ನು ರದ್ದುಪಡಿಸಿ ಎಂದು ಹೇಳುವುದಿಲ್ಲ, ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು, ಸರ್ಕಾರದಿಂದ ಉತ್ತರವನ್ನು ತೆಗೆದುಕೊಂಡು ಆಮೇಲೆ ನಾವು ಪ್ರಶ್ನೋತ್ತರ ವೇಳೆಯ ಮೂಲಕವೇ ಪ್ರಾರಂಭ ಮಾಡೋಣ. ಆ ಒಂದು ಅವಕಾಶ ನಿಮಗೆದೆ. ಹಿಂದೆ ತಾವೇ ಮಾಡಿದ್ದೀರಿ.

Mr. SPEAKER : First hour will be the question hour.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಹೇಳಿದುದ್ದು ಸರಿ ಇದೆ. ಆದರೆ ಹಿಂದೆ ವಿಶೇಷ ಸಂದರ್ಭದಲ್ಲಿ ತಾವು ಅವಕಾಶ ಮಾಡಿಕೊಟ್ಟು ಆಮೇಲೆ ಪ್ರಶ್ನೋತ್ತರ ವೇಳೆಯನ್ನೂ ಕೂಡ ತೆಗೆದುಕೊಂಡಿದ್ದೀರಿ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಇದ್ದಾಗ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಫಸ್ಟ್ ಅವರ್‌ನಲ್ಲಿ ಪ್ರಶ್ನೋತ್ತರ ವೇಳೆ ಇಲ್ಲವೆಂದರೆ ಪ್ರಶ್ನೋತ್ತರ ವೇಳೆ ಹೋಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲ ಮೊನ್ನೆ ನಾವು ಮಾಡಿದ್ದೇವೆ. ಇಲ್ಲಿ ಉತ್ತರ ತೆಗೆದುಕೊಂಡು ಆಮೇಲೆ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಂಡಿದ್ದೇವೆ. ತಾವೆಯೇ ಒಂದು ವಿಶೇಷವಾದ ಸಂದರ್ಭ ಎಂದು ಪರಿಗಣಿಸುವುದಕ್ಕೆ ತಾವು ಅವಕಾಶ ಮಾಡಿ ಕೊಟ್ಟಿದ್ದೀರಿ.

ಅಧ್ಯಕ್ಷರು : ವಿಶೇಷ ಸಂದರ್ಭದಲ್ಲಿ ಪ್ರಶ್ನೋತ್ತರ ವೇಳೆಯನ್ನು ಕೈಬಿಟ್ಟು ಬೇರೆ ಬಿಸನೆಸನ್ನು ತೆಗೆದುಕೊಳ್ಳುತ್ತೇವೆ. ಸಂದರ್ಭ ಬಹಳ ಗಂಭೀರವಾಗಿದ್ದರೂ ಕೂಡ, ನೀವು ಹೇಳಿದಷ್ಟು ಅಗತ್ಯವಿಲ್ಲ. ಪ್ರಶ್ನೋತ್ತರ ವೇಳೆಯನ್ನು ಮುಗಿಸೋಣ; ಇದನ್ನು ಆಮೇಲೆ ತೆಗೆದುಕೊಳ್ಳೋಣ.....

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲ, ಮುಖ್ಯಮಂತ್ರಿಗಳು ಎಲ್ಲಿ ಹೋಗಿದ್ದಾರೆ ಸ್ವಾಮಿ? ಇಷ್ಟೊಂದು ಗಂಭೀರವಾದ ಸಮಸ್ಯೆ ಇರಬೇಕಾದರೆ ದೆಹಲಿಗೆ ಹೋದರು, ಅವರು ವಾಪಸ್ ಬಂದಿದ್ದಾರೆಯೇ? ಅಲ್ಲಿ ಏನಾಗಿದೆ? ಅದರ ಬಗ್ಗೆ ಅವರ ಒಂದು ಹೇಳಿಕೆಯನ್ನಾದರೂ ಮಾಡಬೇಕಾಗಿತ್ತಲ್ಲಾ!

ಅಧ್ಯಕ್ಷರು : ಮುಖ್ಯಮಂತ್ರಿಗಳು ನನ್ನ ಜೊತೆ ಚರ್ಚೆ ಮಾಡಿದ್ದಾರೆ; ಅವರು ಸರ್ಕಾರದ ಪರವಾಗಿ ಇಲ್ಲೊಂದು ಮನವಿಯನ್ನು ಸಲ್ಲಿಸಿದ್ದಾರೆ, ಆ ಮನವಿ ನಿನ್ನೆ ಸುಪ್ರೀಂ ಕೋರ್ಟಿನ ಮುಂದೆ ಬರಬೇಕಾಗಿತ್ತು ಈ ದಿವಸ ಬರುತ್ತಿದೆ; ನನಗೆ ಈ ಪರಿಸ್ಥಿತಿ ಇದೆ ಎಂದರು, ಆಯಿತು ಸರ್ಕಾರದ ಪರವಾಗಿ ನಿಮ್ಮ ಮನವಿ ಅಲ್ಲದೆ ಎಂದ ಮೇಲೆ ಅದನ್ನು ತಾವು ನೋಡಿಕೊಂಡು ಬನ್ನಿ ಎಂದು ನಾನು ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸುಪ್ರೀಂ ಕೋರ್ಟ ಮುಂದೆ ಈ ಮನವಿಯನ್ನು ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ, ಬಹುಶಃ ರಾಷ್ಟ್ರಪತಿಗಳನ್ನು ಭೇಟಿ ಮಾಡುವುದಕ್ಕೆ ಮುಂಚೆ, ಮುಖ್ಯನ್ಯಾಯಾಧೀಶರನ್ನು ಭೇಟಿ ಮಾಡುವುದಕ್ಕೆ ಮುಂಚಿಯೇ ಈ ರೀತಿ ಅರ್ಜಿಯನ್ನು ಹಾಕಬಹುದಿತ್ತಲ್ಲ! ಒಂದು ರೀತಿಯಲ್ಲಿ ಇದೊಂದು ಅಕ್ಷಮ್ಯ ಅಪರಾಧ ಇದಾಗುತ್ತದೆಂದು ಹೇಳುತ್ತಿರುವುದು.

ಅಧ್ಯಕ್ಷರು : ಆ ವಿವರವನ್ನೆಲ್ಲಾ ಮುಖ್ಯಮಂತ್ರಿಗಳು ಬಂದ ಮೇಲೆ ಹೇಳುತ್ತಾರೆ, ನೀವು ಅವರು ಮಾತನಾಡಿಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮುಖ್ಯ ನ್ಯಾಯಧೀಶರನ್ನೇ ಭೇಟಿ ಮಾಡುವಂತಹದ್ದು ಬಹುಶಃ ನಮ್ಮ ರಾಜ್ಯದ ಜನತೆಗೆ ಇದೊಂದು ರೀತಿ ಗೌರವ ತರುವಂತಹ ಸಂಗತಿಯಲ್ಲ ಸ್ವಾಮಿ. ಸುಪ್ರೀಂ ಕೋರ್ಟಿನ ಮುಂದೆಯೇ ನಾವು ಒಂದು ರಿವ್ಯೂ ಪಿಟಿಷನ್ ಅರ್ಜಿ ಹಾಕುತ್ತಿದ್ದೇವೆ ಎನ್ನುವ ಸಂದರ್ಭದಲ್ಲಿ, ಸುಪ್ರೀಂ ಕೋರ್ಟಿನ ನ್ಯಾಯಾಧೀಶರನ್ನು ಮಾತನಾಡಿಸಿದರೆ ಅದು ಮುಖ್ಯಮಂತ್ರಿಗಳ ಕರ್ತವ್ಯಚ್ಯುತಿಯಾಗುವುದಿಲ್ಲವೇ? ಅವರು ಒಂದು ರೀತಿಯ ಶಿಫಾರಸ್ಸು ಮಾಡುವುದಕ್ಕೆ ಹೋದರು ಎನ್ನುವ ಭಾವನೆ ಜನರಲ್ಲಿ ಮೂಡುವುದಿಲ್ಲವೇ?

ಶ್ರೀ ಆರ್.ಎಲ್. ಜಾಲಪ್ಪ : ಆಗಲೇ ಹೇಳಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ನಮ್ಮದು ನಿಮ್ಮದು ಪ್ರಶ್ನೆಯಲ್ಲ. ತಮಗೆ ಗೊತ್ತಿದೆ, ಇಡೀ ನಮ್ಮ ಸರ್ಕಾರವೇ ಇವತ್ತು ಜೈಲಿನಲ್ಲಿ ಇದ್ದ ಹಾಗೆ ಇದೆ. ಏಕೆಂದರೆ ಇದು ಯಾರದೋ ತಪ್ಪಿಗಾಗಿ ಅಧಿಕಾರಿಯನ್ನು ಜೈಲಿಗೆ ಹಾಕಿರಬಹುದು, ಆದರೆ ಅವರು ಯಾವ ಕಾರಣಕ್ಕಾಗಿ ಜೈಲಿಗೆ ಹೋಗಿದ್ದಾರೆ ಎನ್ನುವುದನ್ನು ಚರ್ಚೆ ಮಾಡುವುದು ಬಹಳ ಅವಶ್ಯಕ ಇದಕ್ಕಾಗಿ ಪ್ರಶ್ನೋತ್ತರ ವೇಳೆಯನ್ನು ಮುಂದೂಡಬೇಕೆಂದು ನಾನು ಕೇಳುತ್ತಿದ್ದೇನೆ. ಮುಂದೆ ಆಗಬಾರದು ಎನ್ನತಕ್ಕಂತಹದ್ದಿಲ್ಲ, ಏಕೆಂದರೆ, ಈ ಇರತಕ್ಕಂತಹ ಸಮನ್ವಯ ಗಾಂಭೀರ್ಯತೆಯನ್ನು ಕಂಡುಹಿಡಿದು ತಾವು ಚರ್ಚೆಗೆ ತೆಗೆದುಕೊಳ್ಳಬೇಕು, ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಬಹುದು, ಅದು ಅಷ್ಟೇನೂ ಪ್ರಾಮುಖ್ಯವಲ್ಲ, ಏಕೆಂದರೆ, ಪ್ರಶ್ನೋತ್ತರ ವೇಳೆ ಎಂದರೆ ತಮಗೆಲ್ಲಾ ಗೊತ್ತಿದೆ, ಈ ಪ್ರಶ್ನೆಗಳು 15 ನಂತರವೂ ಬರುತ್ತವೆ. ಬೇಕಾದರೆ ನೀವು ನಾಳೆಯೂ ಪುನರಾವರ್ತನೆ ಮಾಡಬಹುದು. ಇವತ್ತು ಉದ್ಭವಿಸಿದಂತಹ ಪ್ರಶ್ನೆ ಏನಿದೆ, ಅದು

ಕಾನೂನು ಸುವ್ಯವಸ್ಥೆಗೆ ಸಂಬಂಧಪಟ್ಟದ್ದು ಇದೆ, ಆಡಳಿತಕ್ಕೆ ಸಂಬಂಧಪಟ್ಟದ್ದು ಇದೆ ಮತ್ತು ಇಡೀ ನಮ್ಮ ಕರ್ನಾಟಕ ರಾಜ್ಯದಲ್ಲಿರುವ ಐದು ಲಕ್ಷ ಜನ ನೌಕರರ ಏನಿದ್ದಾರೆ ಅವರಿಗೆ ನೇರವಾಗಿ ನೋವಾಗತಕ್ಕಂತಹದ್ದು ಮತ್ತು ಇನ್ನು ಮುಂದೆ ಸರ್ಕಾರದ ಆಜ್ಞೆಯನ್ನು ಪಾಲನೆ ಮಾಡಬೇಕೋ ಬೇಡವೋ? ನಾಳೆ ಅದೇ ಸೂಚನೆಗಳು, ತುರ್ತು ಸೂಚನೆಗಳನ್ನು ದೂರವಾಣಿಯ ಮೂಲಕ ಕೊಡುತ್ತಾರೆ, ಮೌಖಿಕ ಸೂಚನೆಯನ್ನು ಕೊಡುತ್ತಾರೆ, ಪ್ರವಾಸದ ಮೇಲೆ ಹೋದಾಗ ಅಧಿಕಾರಿಗಳನ್ನು ಕರೆಯಿಸಿ ಸೂಚನೆಗಳನ್ನು ಹೇಳುತ್ತಾರೆ. ಅದನ್ನು ಜಾರಿಗೊಳಿಸಲು ಸಾಧ್ಯವೋ ಇಲ್ಲವೋ ಎನ್ನತಕ್ಕಂತಹ ಪ್ರಶ್ನೆ ಇದೆ. ರಾಜ್ಯದಲ್ಲಿ ಆಡಳಿತವೇ ಕುಸಿದು ಬೀಳುವ ಪರಿಸ್ಥಿತಿ ಇದೆ. ಆದ್ದರಿಂದ ಈಗ ನಾವೂ ಸುಮ್ಮನೆ ಒಂದು ಪ್ರಶ್ನೋತ್ತರ ಕಾಲವನ್ನು, ತೆಗೆದುಕೊಂಡು ನೋಡಿ ಪರೀಶೀಲನೆ ಮಾಡುತ್ತೇವೆ ಎಂಬ ಉತ್ತರವನ್ನು ಪಡೆದು ಕೊಳ್ಳುವುದಕ್ಕಿಂತ ಮೊದಲು ಇದು ತೀರ್ಮಾನವಾಗಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲ್ಲದಕ್ಕಿಂತ, ಇದು ಸಂವಿಧಾನ ಬಿಕ್ಕಟ್ಟು ಅಲ್ಲವೆ ಸ್ವಾಮಿ? ನಾವು ಈ ಸರ್ಕಾರವೇ ಅಧಿಕಾರದಲ್ಲಿ ಮುಂದುವರೆಯಬಾರದೆಂದು ಹೇಳುತ್ತಿದ್ದೇವೆ. ಇಲ್ಲಿ ಸಂವಿಧಾನದ ಬಿಕ್ಕಟ್ಟು ಇರಬೇಕಾದರೆ, ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಹೇಳುತ್ತಿರುವ ಈ ಸಂದರ್ಭದಲ್ಲಿ ಈ ಸದನದ ಕಲಾಪವನ್ನು ನಡೆಸುವುದು ಎಷ್ಟರಮಟ್ಟಿಗೆ ಸೂಕ್ತ ಹೇಳಿ ಸ್ವಾಮಿ?

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಈಗ, ಈ ವಾಸುದೇವನ್ ಪ್ರಕರಣದಿಂದಾಗಿ ಬಹಳ ಗಂಭೀರವಾದಂಥ ಪರಿಸ್ಥಿತಿ ಉಂಟಾಗಿದೆ ಎಂದು ನಮಗೆ ಅರ್ಥವಾಗಿದೆ ಮತ್ತು 4-5 ದಿವಸಗಳಿಂದ ಮುಖ್ಯಮಂತ್ರಿಗಳು ಸದನದಲ್ಲಿ ಇಲ್ಲ. ಮುಖ್ಯಮಂತ್ರಿಗಳು ಬೇರೆ ಏನೇನು ಕಾರ್ಯಕ್ರಮವನ್ನು ಮಾಡುತ್ತಿದ್ದಾರೆನ್ನುವುದು ಪತ್ರಿಕೆಗಳು ಮೂಲಕ ನಾವು ನೋಡುತ್ತಿದ್ದೇವೆ. ಈ ಮಧ್ಯೆ ತಾವೇ, ವಾಸುದೇವನರವರು ಪೋಲಿಸರ ಹತ್ತಿರ ಹೋಗಿ ಶರಣಾಗತರಾಗಿ ಜೈಲಿಗೆ ಹೋಗಿರತಕ್ಕಂತಹದ್ದು ನಿನ್ನೆ ಎಲ್ಲಾ ದೂರದರ್ಶನ, ಆಕಾಶವಾಣಿ ಮತ್ತು ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಅದರ ಜೊತೆಗೆ ನಮ್ಮ ರಾಜ್ಯ ಮಂತ್ರಿಗಳಾದ ದೇಶಪಾಂಡೆಯವರು ಅಲ್ಲಿಗೆ ಹೋಗಿದ್ದಾರೆ, ಮತ್ತು ಹಿರಿಯ ಐ.ಎ.ಎಸ್ ಅಧಿಕಾರಿಗಳೆಲ್ಲಾ ಅಲ್ಲಿಗೆ ಹೋಗಿದ್ದಾರೆ. ಇದೆಲ್ಲಾ ಪರಿಸ್ಥಿತಿಯನ್ನು ನೋಡಿದಾಗ, ಒಂದು ರೀತಿಯಲ್ಲಿ ಈ ಸದನ ನಡೆಯುವಾಗ, ಹೊರಗಡೆ ಬಹಳ ಬೀಕರವಾದಂಥ, ಗಂಭೀರವಾದಂಥ ಪರಿಸ್ಥಿತಿ ನಿರ್ಮಾಣವಾಗಿರುವುದನ್ನು ಸಮಗ್ರವಾಗಿ ಚರ್ಚೆ ಮಾಡುವಂಥದ್ದು ಅತ್ಯಂತ ಅಮೂಲ್ಯವೆಂದು ನಾನು ತಮಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ತಾವು ದಯಮಾಡಿ, ಈ ಒಂದು ಪ್ರಾಮುಖ್ಯತೆಯ ಅರ್ಥಮಾಡಿಕೊಂಡು ಈ ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ಇದನ್ನು ನೇರವಾಗಿ ಚರ್ಚೆಗೆ ತೆಗೆದುಕೊಳ್ಳುವುದು ಸೂಕ್ತ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಏಕೆಂದರೆ ಇದು ಬಹಳ ಗಂಭೀರವಾದಂತಹ ಪರಿಸ್ಥಿತಿ. ಇದರಲ್ಲಿ ಯಾರು ತಪ್ಪಿತಸ್ಥರು ಏನು ಎನ್ನುವುದೆಲ್ಲಾ ಗೊತ್ತಾಗಬೇಕಾಗುತ್ತದೆ. ವರ್ಷಾನುಗಟ್ಟಲೆ ನಡೆದಿರುವ ಪತ್ರವ್ಯವಹಾರವೇನು? ಈ ಅಧಿಕಾರಿ ನೇರವಾಗಿ ಯಾವುದಕ್ಕೆ ಸಂಬಂಧಪಡುತ್ತಾನೆ? ಈ ಅಧಿಕಾರಿಯನ್ನು ದಾರಿ ತಪ್ಪಿಸಿದಂತಹವರು ಯಾರು? ಹೀಗೆ ಅನೇಕ ವಿಚಾರಗಳು ಗೊತ್ತಾಗುತ್ತದೆ. ಅನೇಕ ಕಾಗದಪತ್ರಗಳನ್ನು ಈ ಸದನದ ಮುಂದೆ ಮಂಡಿಸಬೇಕಾಗುತ್ತದೆ.

ಇದಕ್ಕೆ ಹಿಂದಿನ ಸರ್ಕಾರದ ಹೊಣೆ ಏನು? ಈ ಸರ್ಕಾರದ ಹೊಣೆ ಏನು ಎಂದು ಪ್ರತಿಯೊಂದೂ ಕೂಡ ಚರ್ಚೆಯಾಗಬೇಕಾಗಿರುವುದರಿಂದ ಇದನ್ನು ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಈಗಲೇ ಕೊಡಿ ಎಂದು ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ತಮ್ಮ ಎಲ್ಲಾ ಮನವಿಯನ್ನು ಆಲಿಸಿದ ಮೇಲೆ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳಬೇಕೆನ್ನುವ ತೀರ್ಮಾನಕ್ಕೆ ಬಂದಿದ್ದೇನೆ. ಆದುದರಿಂದ ಮೊದಲನೆಯ ಪ್ರಶ್ನೆಯನ್ನು ಮಲ್ಲಿಕಾರ್ಜುನ ಖರ್ಗೆಯವರು ಕೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಇದನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ. ಏಕೆಂದರೆ ನನ್ನ ಪ್ರಶ್ನೆ ಇದ್ದರೂ ಕೂಡ ಇದು ಬಹಳ ಮುಖ್ಯವಾದದ್ದು, ಅದಕ್ಕೆ ನಾನು ಹೇಳುತ್ತಿದ್ದೇನೆ. ಸರ್ವೇಯರ್ಸ ಬಗ್ಗೆ ನಾನು ಕೇಳಿರುವಂತಹ ಪ್ರಶ್ನೆಗೆ ಮಂತ್ರಿಗಳು ಯಾವಾಗಲಾದರೂ ಉತ್ತರ ಹೇಳಬಹುದು. ಆದರೆ ಈ ನಮ್ಮ ವಾಸುದೇವನ್ ಜೈಲಿಗೆ ಹೋಗಿದ್ದು, ಇದು ಬಹಳ ಗಂಭೀರವಾದ ಪ್ರಶ್ನೆಯಾಗಿದೆ. ಅದಕ್ಕಾಗಿ ತಾವು ಈ ಬಗ್ಗೆ ಪುನರಪರಿಶೀಲನೆ ಮಾಡಬೇಕೆಂದು ಮತ್ತೊಮ್ಮೆ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ನಾನೂ ಸಹ ಪ್ರತ್ಯೇಕವಾಗಿ ಅತ್ಯಂತ ಕಳಕಳಿಯಿಂದ ನಿಮಗೆ ಒಂದು ಮಾತನ್ನು ಹೇಳುತ್ತೇನೆ, ನೀವು ಅಧಿಕಾರದಲ್ಲಿದ್ದಾಗ ಅಲ್ಲೂ ಕೆಲಸ ಮಾಡಿದ್ದೀರಿ, ಇಲ್ಲಿ ಮೊದಲನೆ ಬೆಂಚನಲ್ಲೂ ಕೆಲಸ ಮಾಡಿದ್ದೀರಿ. ಬಹುಶಃ ನನ್ನ ಅನಿಸಿಕೆಯ ಪ್ರಕಾರ ಒಂದಲ್ಲ ಒಂದು ದಿವಸ ಈ ರಾಜ್ಯದ ಜವಾಬ್ದಾರಿಯನ್ನು ಹೊರುವುದಕ್ಕೆ ಆರ್ಹರಾಗಿರುವವರ ಪೈಕಿ ನೀವೂ ಒಬ್ಬರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದಕ್ಕೆ ಇವೆಲ್ಲವನ್ನೂ ಮಾಡಬೇಕಾಗುತ್ತದೆ.

ಅಧ್ಯಕ್ಷರು : ಆದುದರಿಂದ ನಾನು ನಿಮಗೆ ಏನು ಹೇಳುತ್ತೇನೆಂದರೆ, ಅಲ್ಲಿಯವರೆಗೆ ಈ ರೀತಿಯ ಸಂದರ್ಭಗಳಲ್ಲೆಲ್ಲಾ ನೀವು ಹೀಗೆ ಬಹಳ ಪಟ್ಟು ಹಿಡಿದರೆ, ನೋಡಿ, ಮುಂದೆ ಇದೆಲ್ಲಾ ನಿಮಗೇ ತೊಂದರೆಯಾಗಬಹುದು. ನಾನು ನಿಮ್ಮ ಹಿತೈಷಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಖರ್ಗೆಯವರಿಗೆ ಒಳ್ಳೆಯ ಅವಕಾಶ ಸಿಗುವುದಿದ್ದರೆ ಅವರು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕು.....

(ಗೊಂದಲ)

ಅಧ್ಯಕ್ಷರು : ನಿಮ್ಮನ್ನು ಸೇರಿಸಿಕೊಂಡು, ನಿಮ್ಮಿಬ್ಬರಲ್ಲಿ ಯಾರು ಮೊದಲು ಆ ಜಾಗಕ್ಕೆ ಬರಬಹುದೆಂದು ನಾನು ಸಿನಿಯಾರಿಟಿಯನ್ನು ಎಕ್ಸಾಮಿನ್ ಮಾಡುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ನಿಜವಾಗಿಯೂ ಆದಷ್ಟು ಬೇಗ ನಾನಾಗಲಿ, ಖರ್ಗೆಯವರಾಗಲಿ ಆ ಜಾಗಕ್ಕೆ ಬರಬೇಕೆನ್ನುವ ಕಳಕಳಿ ನಿಮಗಿದೆ ಎನ್ನುವ ವಿಶ್ವಾಸ ನನಗಿದೆ. ಆದರಲ್ಲಿ

ಈ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ಕೇಳುತ್ತಿದ್ದೇನೆ. ಏಕೆಂದರೆ ವಾಸುದೇವನರವರನ್ನು ಬೆಳಿಗ್ಗೆ ನಾವು ಭೇಟಿ ಮಾಡುವುದಕ್ಕೆ ಹೋಗಿದ್ದೆವು.

(ಗೊಂದಲ)

ಅಧ್ಯಕ್ಷರು : ನನಗೆ ಯಾರ್ಯಾರು ಎಲ್ಲೆಲ್ಲಿ ಇದ್ದಾರೋ ಅವರು ಅಲ್ಲೇ ಇದ್ದು ನನ್ನನ್ನು ಇಲ್ಲೇ ಇರಬೇಕೆಂಬುದು ನನ್ನ ಕಳಕಳಿ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ತಾವು ಈಗ ತಾರತಮ್ಯ ಮಾಡಿಬಿಟ್ಟರಿ.

ಅಧ್ಯಕ್ಷರು : ನೀವು ನಾವು ಎಲ್ಲಾ ಸೇರಿ ಮಾಡುವುದು ಬೇರೆ ವ್ಯವಸ್ಥೆ. ಇವರ ಜೊತೆಗೆ ನಾವು ಇಲ್ಲ. ನೀವು ಆ ಜಾಗಕ್ಕೆ ನಿಮ್ಮ ಹೆಸರನ್ನು ಹೇಳಲಿಲ್ಲವೆಂದು ಕೇಳುತ್ತಿದ್ದೀರಿ. ಇಲ್ಲಿ ಹೇಳಿದರೆ ಮತ್ತೆ.....

ಶ್ರೀ ವಾಟಾಳ್ ನಾಗರಾಜ್ : ತಾವು ಆ ಜಾಗಕ್ಕೆ ಬರುವವರು ಎನ್ನುವ ವಿಶ್ವಾಸವನ್ನು ನಾನು ಇಟ್ಟುಕೊಂಡಿದ್ದೇನೆಂದು ನೀವು ಖಿರ್ಗೆಯವರಿಗೆ ಹೇಳಿದಿರಿ, ಅದೇಕೆ ನೀವು ನನಗೆ ಹೇಳಲಿಲ್ಲ.

ಅಧ್ಯಕ್ಷರು : ನಮ್ಮದು ಬೇರೆ ವ್ಯವಸ್ಥೆ ಇದೆಯಲ್ಲಾ.

ಶ್ರೀ ವಾಟಾಳ್ ನಾಗರಾಜ್ : ನಿಜವಾಗಿಯೂ ನೀವು ತಾರತಮ್ಯ ಮಾಡುತ್ತಿದ್ದೀರಿ. ನಿಮ್ಮ ಮಾತಿನ ಮೇಲೆ....

ಅಧ್ಯಕ್ಷರು : ಈಗ ಅವರಾದ್ದಾದರೆ ಪರವಾಗಿಲ್ಲ, ನಮ್ಮದನ್ನೆಲ್ಲಾ ಈಗಲೇ ಬಹಿರಂಗ ಮಾಡಿದರೆ ಇಲ್ಲಿ ಬಹಳ ಸಂಚುಕೋರರಿದ್ದಾರೆ, ನಮಗೆ ತೊಂದರೆ ಮಾಡುತ್ತಾರೆ. ಅದಕ್ಕೆ ನಾವು ಅವಕಾಶ ಕೊಡಬಾರದು ತಾವು, ನಾನು ಬೈರೇಗೌಡರು ಏನು ಮಾತನಾಡಿದ್ದೇವೆ ಆ ಮಾತು ಇನ್ನೂ ಇದೆ.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ಅದನ್ನು ಬೇರೆ ಸಮಯದಲ್ಲಿ ಇಟ್ಟುಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಬೆಳಿಗ್ಗೆ ಜೈಲ್ ಸುಪರಿಂಟೆಂಡೆಂಟ್‌ರವರನ್ನು ಸಂಪರ್ಕಿಸಿ, ವಾಸುದೇವನ್‌ರವರನ್ನು ಭೇಟಿ ಮಾಡಿ ಅನುಕಂಪ ತೋರಿಸಿ, ನಾವೆಲ್ಲರೂ ನಿಮ್ಮ ಜೊತೆಗಿದ್ದೇವೆ ಎಂದು ಹೇಳೋಣವೆಂದು ಸೆಂಟ್ರಲ್ ಜೈಲಿಗೆ ಹೋಗಿದ್ದೆ. ಆದರೆ ಅವರು ಯಾರನ್ನು ನೋಡಲು ಇಚ್ಛಿಪಡಲಿಲ್ಲ. ಈ ರೀತಿಯ ಒಂದು ಪರಿಸ್ಥಿತಿಯಲ್ಲಿ ನಿಜಕ್ಕೂ ನಮಗೆಲ್ಲಾ ನೋವಾಗುವಂತಹ ಘಟನೆ. ಅದಕ್ಕೆ ತಾವೇನಾದರೂ ಮತ್ತೊಮ್ಮೆ ಪುನರ್ ಪರಿಶೀಲಿಸಿ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಈಗ ಮೊದಲನೆಯ ಪ್ರಶ್ನೆ ಮಲ್ಲಿಕಾರ್ಜುನ ಖಿರ್ಗೆಯವರದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಸರ್ವೇಯರ್ಸ್‌ಗಳನ್ನು ನೇಮಕ ಮಾಡುವುದು

316 - ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ (ಗುರುಮಿಟ್ಕಲ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?